ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) —ಹೌದು—

ಆ) ೫೦೦ ಲಕ್ಷ ರೂಪಾಯಿಗಳು.

ಇ) ಈ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದ್ದು, ಆರ್ಥಿಕಾತ್ಮಕ ಮಂಜೂರಾತಿ ನೀಡಿದ ನಂತರ ಕಾಮಗಾರಿ ಪ್ರಾರಂಭಿಸಿದ ೩ ವರ್ಷಗಳಲ್ಲಿ ಪೂರ್ಣಗೊಳಿಸಬಹುದಾಗಿದೆ.

ಸರ್ಕಾರದಿಂದ ಅನುದಾನ ಪಡೆಯುತ್ತಿರುವ ದೀನದಯಾಳು ಉನ್ನತ ಪ್ರಾಥಮಿಕ ಶಾಲೆ ಯಂಶವಂತಪುರದಲ್ಲಿ ಶಿಕ್ಷಕರುಗಳಿಗೆ ಕಿರುಕುಳ.

೮೬೯ ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಹಾಗೂ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಬೆಂಗಳೂರು ಯಶವಂತಪುರದಲ್ಲಿರುವ ದೀನದಯಾಳು ಉನ್ನತ ಪ್ರಾಥಮಿಕ ಶಾಲೆಯು ಸರ್ಕಾರದಿಂದ ಅನುದಾನ ಪಡೆಯುತ್ತಿರುವುದು ನಿಜವಲ್ಲವೆ ;

ಆ) ಈ ಮೇಲ್ಕಂಡ ಶಾಲೆಯಲ್ಲಿ ಎಷ್ಟು ಜನ ಶಿಕ್ಷಕ ಶಿಕ್ಷಕಿಯರು ಕೆಲಸ ಮಾಡುತ್ತಿದ್ದಾರೆ ;

ಇ) ಈ ಶಾಲೆಯಲ್ಲಿ ಕೆಲಸ ಮಾಡತಕ್ಕ ಸಹಾಯಕ ಶಿಕ್ಷಕಿಯರಿಗೆ ಆಡಳಿತ ಮಂಡಳಿಯವರು ಸರಿಯಾಗಿ ಸಂಬಳ, ಬಡ್ತಿ, ಹಾಗೂ ಇನ್‌ಕ್ರಿಮೆಂಟ್ ನೀಡದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ ಕನ್ನಡ ಹಾಗೂ ಸಂಸ್ಕೃತಿ ಮಂತ್ರಿಗಳು).—

ಅ) ಹೌದು

ಆ) ಶಿಕ್ಷಕರು ೧ ಶಿಕ್ಷಕಿಯರು ೫

ಇ) ಇಲ್ಲ. ಆದರೆ ಶ್ರೀಮತಿ ಎಸ್ ವರಲಕ್ಷ್ಮಮ್ಮ ಸಹ ಶಿಕ್ಷಕಿ ಇವರ ಮೇಲೆ ಆಶಿಸ್ತಿನ ಆರೋಪಗಳು ಇರುವ ಕಾರಣ, ಇವರಿಗೆ ಜನವರಿ ೮೮ ಮತ್ತು ೮೯ನೇ ಸಾಲುಗಳ ಎರಡು ವಾರ್ಷಿಕ ಬಡ್ತಿಗಳನ್ನು ಮಂಜೂರು ಮಾಡಿರುವುದಿಲ್ಲ. ಆದರೆ, ೯೦ರ ಜನವರಿ ಮಾಹೆಯಲ್ಲಿ ಇವರಿಗೆ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡಲಾಗಿದೆ.

ರಾಜ್ಯದಲ್ಲಿ ಹೊಸ ಕೃಷಿ ವಿಶ್ವವಿದ್ಯಾನಿಲಯಗಳ ಸ್ಥಾಪನೆ

೧೧೨೦ ಶ್ರೀ ಪಿ. ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿ ಹೊಸದಾಗಿ ಕೃಷಿ ವಿಶ್ವವಿದ್ಯಾನಿಲಯಗಳನ್ನು ತೆರೆಯುವ ಯೋಜನೆ ಸರ್ಕಾರಕ್ಕಿದೆಯೆ ;

ಆ) ಹಾಗಿದ್ದಲ್ಲಿ, ಯಾವಾಗ ಮತ್ತು ಎಲ್ಲಿ ತೆರೆಯಲಾಗುವುದು ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು)—

ಅ) ಇಲ್ಲ.

ಆ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.